For more job news visit : www.kpscvaani.com

ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ. ಇಡಿ/ಕೆಇಎ/ಆಡಳಿತ/ಸಿಆರ್.04/2025-26 ದಿನಾಂಕ. 04.05.2026

ಪ್ರಕಟಣೆ

ಸರ್ಕಾರದ ಆದೇಶ ಸಂಖ್ಯೆ. ಸಿಆಸುಇ/02/ಸೇಹಿಮ/2026 ದಿನಾಂಕ 27.04.2026 ರಲ್ಲಿ ಈ ಕೆಳಗಿನಂತೆ ಆದೇಶಿಸಿದೆ.

"ಸರ್ಕಾರದ ಆದೇಶ ಸಂಖ್ಯೆ. ಸಿಆಸುಇ 02 ಸೇಹಿಮ 2025 ದಿನಾಂಕ 03.09.2025 ರನ್ವಯ ಪರಿಶಿಷ್ಟ ಜಾತಿಗೆ ಒಳಮೀಸಲಾತಿಯನ್ನು ಅಳವಡಿಸಿಕೊಂಡು ಚಾಲ್ತಿಯಲ್ಲಿರುವ ನೇಮಕಾತಿ ಪ್ರಕ್ರಿಯೆಗಳನ್ನು, ಅಥವಾ ಸರ್ಕಾರದ ಆದೇಶ ಸಂಖ್ಯೆ. ಸಿಆಸುಇ 01 ಸೇಹಿಮ 2026 ದಿನಾಂಕ 27.02.2026 ರಂತೆ ಒಳಮೀಸಲಾತಿ ಅಳವಡಿಸದೇ ಹೊರಡಿಸಿರುವ ಎಲ್ಲಾ ನೇಮಕಾತಿ ಅಧಿಸೂಚನೆಗಳನ್ನು ಹಿಂಪಡೆದು ಮೇಲಿನಂತೆ ಒಳಮೀಸಲಾತಿ ಅಳವಡಿಸಿಕೊಂಡು ಪರಿಷ್ಕೃತ ಅಧಿಸೂಚನೆಗಳನ್ನು ಕೂಡಲೇ ಹೊರಡಿಸಿ ನೇಮಕಾತಿಗಳನ್ನು ಮಾಡುವುದು."

ಮುಂದುವರೆದು, ದಿನಾಂಕ 30.04.2026 ರ ಸಚಿವ ಸಂಪುಟ ಸಭೆಯ ನಿರ್ಣಯದಂತೆ ಈಗಾಗಲೇ ಪರೀಕ್ಷೆ ನಡೆಸಿರುವ ಹುದ್ದೆಗಳನ್ನು ಹೊರತು ಪಡಿಸಲು ಸೂಚಿಸಿರುವುದರಿಂದ, ಪ್ರಾಧಿಕಾರದಿಂದ ಕೆಳಕಂಡ ಹುದ್ದೆಗಳಿಗೆ ದಿನಾಂಕ : 09.05.2026 ಮತ್ತು 10.05.2026 ರಂದು ನಿಗಧಿಗೊಳಿಸಲಾದ ಪತ್ರಿಕೆ-1 ಮತ್ತು ಪತ್ರಿಕೆ-2 ನಿರ್ದಿಷ್ಟ ಪತ್ರಿಕೆಗಳ ಪರೀಕ್ಷೆಯನ್ನು ರದ್ದುಗೊಳಿಸಲಾಗಿದೆ.

ಪರೀಕ್ಷೆ ದಿನಾಂಕ	ಇಲಾಖೆ/ಸಂಸ್ಥೆ	ಹುದ್ದೆಗಳ ಪದನಾಮ
09.05.2026 & 10.05.2026	ಆರ್.ಜಿ.ಯು.ಹೆಚ್.ಎಸ್	ಜೂನಿಯರ್ ಪ್ರೋಗ್ರಾಮರ್
	ಬಿ.ಡಬ್ಲ್ಯೂ.ಎಸ್.ಎಸ್.ಬಿ	ಸಹಾಯಕ ಅಭಿಯಂತರರು (ಕಂಪ್ಯೂಟರ್ ಸೈನ್ಸ್)
	ಆರ್.ಜಿ.ಯು.ಹೆಚ್.ಎಸ್	ಸಹಾಯಕ ಅಭಿಯಂತರರು (ಸಿವಿಲ್)
	ಕೃಷಿ ಮಾರಾಟ ಇಲಾಖೆ	
	ಕೆ.ಎಸ್.ಎಸ್.ಐ.ಡಿ.ಸಿ	
	ಬಿ.ಡಬ್ಲ್ಯೂ.ಎಸ್.ಎಸ್.ಬಿ	
	ಕೆ.ಎಸ್.ಎಸ್.ಐ.ಡಿ.ಸಿ	ಸಹಾಯಕ ಕಾರ್ಯಪಾಲಕ ಅಭಿಯಂತರರು (ಸಿವಿಲ್)
	ಬಿ.ಡಬ್ಲ್ಯೂ.ಎಸ್.ಎಸ್.ಬಿ	ಸಹಾಯಕ ಅಭಿಯಂತರರು (ಮೆಕ್ಯಾನಿಕಲ್)

ಮುಂದುವರೆದು, ದಿನಾಂಕ 26.04.2026 ಮತ್ತು 27.04.2026 ರಂದು ನಡೆಸಲಾದ ಪತ್ರಿಕೆ-2 ಪರೀಕ್ಷೆಯ (ವ್ಯವಸ್ಥಾಪಕರು, ಸಹಾಯಕ ವ್ಯವಸ್ಥಾಪಕರು ಮತ್ತು ಸಹಾಯಕ ಅಭಿಯಂತರರು (ವಿದ್ಯುತ್) ಹುದ್ದೆಗಳ) ಅಭ್ಯರ್ಥಿಗಳಿಗೆ, ಪತ್ರಿಕೆ-1 ಸಾಮಾನ್ಯ ಜ್ಞಾನ ಪತ್ರಿಕೆಯನ್ನು ದಿನಾಂಕ 09.05.2026 ಮತ್ತು 10.05.2026 ರಂದು ದಿನಾಂಕ 08.04.2026 ರ ವೇಳಾ ಪಟ್ಟಿಯಂತೆ ನಡೆಸಲಾಗುವುದು. ಸದರಿ ಪರೀಕ್ಷೆಯ ಪ್ರವೇಶ ಪತ್ರವನ್ನು ಪ್ರಾಧಿಕಾರದ ವೆಬ್ ಸೈಟ್ ಮೂಲಕ ಡೌನ್ಲೋಡ್ ಮಾಡಿಕೊಳ್ಳಲು ಸೂಚಿಸಿದೆ.

ಕಾರ್ಯನಿರ್ವಾಹಕ ನಿರ್ದೇಶಕರು

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru - 560 012.
Phone: 080 - 23 564 583 Helpline : 080 - 23 460 460.
e-mail : keauthority-ka@nic.in Website : http://kea.kar.nic.in